ಅವರನ್ನು ಸ್ಕೂಟರಿನಲ್ಲಿ ಕೂರಿಸಿಕೊಂದು ಆಟೊ ಸ್ಟ್ಯಾಂಡ್‌ಗೆ ಬಿಟ್ಟು ಹೋದೆ.

ಆ ದಿನ ರಾತ್ರಿ ಧರಣೇಂದ್ರಯ್ಯನವರು ಮನೆಗೆ ಬರಲಿಲ್ಲ. ಎಲ್ಲಿಗೆ ಹೋಗಿರಬಹುದು ಎಂಬ ಪ್ರಶ್ನೆ ಪದೇ ಪದೇ ತಲೆಯೊಳಗೆ ಸುತ್ತ ತೊಡಗಿತು.

"ಸದ್ಯ ಈಗಲಾದರೂ ಆ ಅನಿಷ್ಟ ಮನೆ ಬಿಟ್ಟು ತೊಲಗಿತಲ್ಲಾ" ಎಂದು ಅಮ್ಮ ನಿಟ್ಟುಸಿರುಬಿಟ್ಟರು.

ನಾನು ಸ್ವಲ್ಪ ಹೊತ್ತು ಅಮ್ಮನ ಮುಖವನ್ನೇ ನೋಡುತ್ತಾ ಕುಳಿತೆ. ಅಮ್ಮನಿಗೆ ಈ ಧರಣೇಂದ್ರಯ್ಯನ ಬಗ್ಗೆ ಏನೂ ತಿಳಿದಿಲ್ಲವೆ? ಎಂಬ ಪ್ರಶ್ನೆ ಮೂಡಿತು.

"ಅಮ್ಮ, ರಾಜಣ್ಣ ತಾತ ಅವರಿಗಿದ್ದ ಎರಡನೇ ಸಂಬಂಧದ ಬಗ್ಗೆ ಗೊತ್ತೆ?" ಎಂದು ಕೇಳಿದೆ.

"ಗೊತ್ತಪ್ಪಾ ಗೊತ್ತು. ಅವರ ಬಗ್ಗೆ ಏನೇನೋ ಕಥೆ ಹೇಳ್ತಾರೆ. ಅವರಿಗೆ ಬೇರೆ ಸಂಬಂಧ ಇತ್ತಂತೆ. ಅವರ ಮಗ ಒಬ್ಬ ಪುಂಡ, ಏನೇನೊ ರಾದ್ಧಾಂತ ಮಾಡಿಕೊಂಡು ಮುಂಬೈಗೆ ಓಡಿ ಹೋದ ಅಂತ ನಿನ್ನ ಅಪ್ಪ ಯಾವಾಗಲೋ ಒಂದು ಸಾರಿ ಹೇಳಿದ್ದ ನೆನಪು."

"ಅಮ್ಮ ಮುಂಬೈಗೆ ಓಡಿಹೋಗಿದ್ದ ಆ ಹುಡುಗನೇ ಈ ಧರಣೇಂದ್ರಯ್ಯ" ಎಂದೆ.

"ಆಂ!" ಎಂದು ಬಾಯ್ತೆರೆದು, ಕಣ್ಣುಗಳನ್ನು ಹಿಗ್ಗಿಸಿ ಅಚ್ಚರಿಗೊಂಡ ಅಮ್ಮ ,"ಅಯ್ಯೋ ಈತನ ಬಗ್ಗೆ ಒಳ್ಳೆ ಅಭಿಪ್ರಾಯ ಇಲ್ಲ ಕಣೋ. ಆದಷ್ಟು ಬೇಗ ಈತನ ಮನೆಯಿಂದ ಹೊರಹಾಕು" ಎಂದರು.

ಧರಣೇಂದ್ರಯ್ಯನವರ ಕಥೆಯನ್ನು ಅಮ್ಮನಿಗೆ ಸಾವಕಾಶವಾಗಿ ಹೇಳಬೇಕೆಂದುಕೊಂಡೆ. ಈ ಮಧ್ಯೆ ಸ್ವಾತಿ ಅವರ ಹ್ಯಾಂಡ್‌ಬ್ಯಾಗನ್ನು ಎಳೆದುಕೊಂಡು ಬಂದಳು. ಅವಳ ವರ್ತನೆಯಿಂದ ಸ್ವಲ್ಪ ಬೇಸರಗೊಂಡು, "ಏನಿದು ಮಂಗನಾಟ ಸ್ವಾತಿ. ಹಾಗೆಲ್ಲಾ ಬೇರೆಯವರ ವಸ್ತುಗಳನ್ನು ಮುಟ್ಟಬಾರದು ಅಂತ ಎಷ್ಟು ಸಲ ಹೇಳೋದು ನಿನಗೆ?" ಎಂದು ಗದರುತ್ತಾ ಹ್ಯಾಂಡ್‌ಬ್ಯಾಗನ್ನು ಮೊದಲಿದ್ದ ಸ್ಥಾನದಲ್ಲಿ ಇಡಲು ಎತ್ತಿಕೊಂಡೆ. ಬ್ಯಾಗಿನ ಜಿಪ್ಪು ಸರಿಯಾಗಿ ಹಾಕಿರದ ಕಾರಣ ಅದರೊಳಗಿಂದ ಕೆಲವು ಪತ್ರಗಳು ಕೆಳಗೆ ಬಿದ್ದವು. ಒಂದೆರಡು ಛಾಪಾಕಾಗದದ ಛಾಯಾಪ್ರತಿಗಳು ಮತ್ತು ಒಂದು ಕವರನ್ನ ಆರಿಸಿ ಬ್ಯಾಗಿನೊಳಗೆ ಹಾಕುವಾಗ ಕವರಿನ ಮೇಲೆ ಜಯದೇವ ಆಸ್ಪತ್ರೆಯ ಹೆಸರು ಅಚ್ಚಾಗಿತ್ತು. ಇವರಿಗೂ ಜಯದೇವ ಆಸ್ಪತ್ರೆಗೂ ಏನು ಸಂಬಂಧ ಎಂದು ತಿಳಿಯದೆ ತಲೆ ಕೆಡಿಸಿಕೊಳ್ಳುತ್ತಾ ಪುನಃ ಎಲ್ಲಾ ದಾಖಲೆ, ಪತ್ರಗಳನ್ನು ಹ್ಯಾಂಡ್‌ಬ್ಯಾಗಿನೊಳಗೇ ಹಾಕಿಟ್ಟೆ.

ಎರಡು ದಿನಗಳು ಕಳೆದರೂ ಆ ವ್ಯಕ್ತಿಯ ಸುಳಿವೇ ಇಲ್ಲ. ನನಗೆ ಆತಂಕ ಶುರುವಾಯಿತು. ಹೊರಗೆ ಹೋದಾಗ ಏನಾದರೂ ಅನಾಹುತವಾದರೆ, ಆತ ನಮ್ಮ ಮನೆಯಲ್ಲಿ ತಂಗಿರುವುದರಿಂದ ಅದರ ಹೊಣೆ ನಾನೇ ಹೊರಬೇಕಾಗಿ ಬರಬಹುದೇನೋ ಎಂಬ ಭಯ ಮೆಲ್ಲಗೆ ಉದ್ಭವಿಸತೊಡಗಿತು. ಆದರೆ ಅಮ್ಮ, ಜ್ಯೋತಿ ಹಾಗೂ ಮಕ್ಕಳಿಗೆ ಮಾತ್ರ ಅವರು ಕಾಣದೆ ಹೋದದ್ದು ಸಂತಸವನ್ನುಂಟುಮಾಡಿತ್ತು. ಸಮಯ ಸಿಕ್ಕಾಗಲೆಲ್ಲಾ ಆ ಮುದುಕನನ್ನು ಯಾರ್‍ಯಾರು ಎಷ್ಟೆಷ್ಟು ಗೋಳು ಹುಯ್ದುಕೊಂಡರು ಅಂತ ತಮಾಷೆ ಮಾಡುತ್ತಾ ಖುಷಿ ಪಡುತ್ತಿದ್ದರೆ, ನಾನು ಮಾತ್ರ ಆತಂಕದಲ್ಲೇ ಎರಡು ದಿನಗಳನ್ನು ಕಳೆದೆ. ಮೂರನೇ ದಿನ ಜಯದೇವ ಆಸ್ಪತ್ರೆಯಿಂದ ನನ್ನ ನಂಬರಿಗೆ ಕರೆ ಬಂತು. ನಮ್ಮ ಕಡೆಯವರೊಬ್ಬರು ಆಸ್ಪತ್ರೆಯಲ್ಲಿ ದಾಖಲಾಗಿರುವುದಾಗಿಯೂ, ನನ್ನನ್ನು ಭೇಟಿಯಾಗಲು ಬಯಸುತ್ತಿರುವುದಾಗಿಯೂ ತಿಳಿಸಿದರು. ಈಗಾಗಲೇ ಈ ಮುದುಕ ಕಾಣೆಯಾಗಿ ಒಂದು